ವಯಸ್ಕರ ಶಿಕ್ಷಣ ಲೈಬ್ರರಿ ಇತ್ತು. ಅಲ್ಲೆಲ್ಲ ಹೋಗಿ ಓದಲಿಕ್ಕೆ ಅವಕಾಶ ಸಿಗ್ತು. ಇನ್ನೊಂದು ಕಾರಣ ಬಹಳ ವಿಚಿತ್ರವಾಗಿದೆ. ನಾನು ಡಿಗ್ರಿ ಓದುವಾಗ ಜಿ.ಎಚ್. ನಾಯಕರು ನನ್ನ ಮೇಷ್ಟ್ರು. ಅವಾಗವ್ರು ಅಂದ್ರೆ 1963-64ರಲ್ಲಿ. ವಿದ್ಯಾರ್ಥಿಗಳಿಗೆ ಒಂದು ಅಸೈನ್‌ಮೆಂಟ್, 'ಕಲಿಕೆಯಲ್ಲಿ ಕನ್ನಡ ಮಾಧ್ಯಮ' ಅಂತ ವಿಷಯ ಕೊಟ್ರು. ಎಲ್ಲರೂ ಒಂದೊಂದು ಪ್ರಬಂಧ ಬರೆದುಕೊಂಡು ತರಬೇಕಾಗಿತ್ತು. ಆವಾಗ ನನ್ನ ಪ್ರಬಂಧವನ್ನು ಎತ್ತಿಹಿಡಿದು 'ಇದೊಂದು ಬೇರೆ ತರಹ ಇದೆ' ಅಂತ ಹೊಗಳಿದ್ರು. 'ಇದನ್ನು ಬರೆದವ್ರಿದ್ದಾರಲ್ಲ. ಇವ್ರು ಇನ್ನುಂದೆ ಚೆನ್ನಾಗಿ ಬರೀಬಹುದು. ಇವ್ರು ಈಗಲೇ ಪತ್ರಿಕೆಗೆ ಬರೆಯುವಷ್ಟು ಪ್ರಬುದ್ಧವಾದ ಭಾಷೆಯನ್ನು ಬಳಸಬಲ್ಲರು' ಅಂತ ಹೇಳಿದ್ರು. ಇದೆಲ್ಲ ಹಳ್ಳಿಯಿಂದ ಬಂದ ನನ್ನಂಥ ಹುಡುಗನ ಒಳಗೆ ಎಲ್ಲೋ ಕೆಲಸ ಮಾಡಿರಬಹುದು. ಇವೆಲ್ಲ ಕಾರಣ ಇರಬೇಕು ಅಂತ ಅನಿಸುತ್ತೆ. ಆದ್ರೆ ಇದೆಲ್ಲ ಚಾನ್ಸ್ ಮಾತ್ರ. ಕೇವಲ ಆಕಸ್ಮಿಕ. ನಿಜಕ್ಕೂ ಕನ್ನಡ ಎಂ.ಎ., ಮಾಡೋಕೆ ಯಾಕೆ ಬಂದೆನೊ ಗೊತ್ತಿಲ್ಲ.

◆ **ನೀವು ಎಂಬತ್ತರ ದಶಕದಲ್ಲಿ ಸಾಹಿತ್ಯ ವಿಮರ್ಶೆಯೊಳಗೆ ತೊಡಗಿಸಿಕೊಂಡ್ರಿ. ಆದರೆ ನಿಮ್ಮ ವಿಮರ್ಶೆ ಆ ಕಾಲದ ಅಥವಾ ಅದರ ಹಿಂದಿನ ಕಾಲಘಟ್ಟದ ಯಾವ ವಿಮರ್ಶಾ ಮಾದರಿಗಳಿಗೂ ಹೊಂದೋದಿಲ್ಲ. ಜೊತೆಗೆ ನವ್ಯ ಮಾದರಿಗಳನ್ನೂ ಪ್ರಶ್ನಿಸಿದಿರಿ, ಬಂಡಾಯದ ವಿಮರ್ಶಾ ಮಾದರಿಗಳನ್ನೂ ಪ್ರಶ್ನಿಸಿದಿರಿ. ಒಂಥರದಲ್ಲಿ ನಿಮ್ಮ ವಿಮರ್ಶೆ ನಿಮ್ಮದೇ ಊರು 'ಪಿರಿಯಾಪಟ್ಟಣ ಕಾಳಗ'ದ ತರಹ ಇದೆ. ಕನ್ನಡದಲ್ಲಿ ಈಗಾಗಲೇ ಪ್ರಚಲಿತವಿದ್ದ ಯಾವ ಮಾದರಿಗಳಿಗೂ ಒಳಗಾಗದೆ ಹೊಸ ಮಾದರಿಗಳ ಹುಡುಕಾಟಕ್ಕೆ ಇಳೀಬೇಕು ಅಂತ ಯಾಕನ್ನಿಸ್ತು? ಆವಾಗಿನ ಪ್ರಚಲಿತ ಮಾದರಿಗಳ ಬಗ್ಗೆ ಇದ್ದ ಜಗಳ ಯಾವ ಬಗೆಯದು?**

ಆಗಿನ ಜನಪ್ರಿಯ ಮಾದರಿಗಳು

ಕೆ.ವಿ. ನಾರಾಯಣ (ಜ: 1948) ಮಹತ್ವದ ಭಾಷಾ ಚಿಂತಕರು. ಭಾಷೆಯ ಸಾಹಿತ್ಯಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಆಳವಾಗಿ ಶೋಧಿಸಿದವರು. ಅಪರೂಪದ ಒಳನೋಟಗಳ ಮೂಲಕ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಗಂಭೀರವಾಗಿ ರೂಪಿಸಿದ್ದಾರೆ. ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಕಂಪಲಾಪುರದವರಾದ ಕೆವಿಎನ್ ನೆಲೆನಿಂತದ್ದು ಬೆಂಗಳೂರಿನಲ್ಲಿ. ಅಮ್ಮ ಕೆಂಚಮ್ಮ, ಅಪ್ಪ ಕೆ.ಆರ್. ವೀರಣ್ಣ. ಸ್ತ್ರೀವಾದಿ ಚಿಂತಕಿ ಎಚ್.ಎಸ್. ಶ್ರೀಮತಿ ಇವರ ಜೀವನ ಸಂಗಾತಿ. ಕೆವಿಎನ್ ಅವರು ಕಂಪಲಾಪುರ, ಪಿರಿಯಾಪಟ್ಟಣ, ಮೈಸೂರು ಮತ್ತು ಬೆಂಗಳೂರಿನಲ್ಲಿ ಶಿಕ್ಷಣ ಪೂರೈಸಿದರು. ಮುಂದೆ ಪ್ರಸಿದ್ಧ ಕವಿ ಜಿ.ಎಸ್. ಶಿವರುದ್ರಪ್ಪನವರ ಮಾರ್ಗದರ್ಶನದಲ್ಲಿ ಆನಂದವರ್ಧನನ 'ಧ್ವನ್ಯಾಲೋಕ' ಕುರಿತು ಪಿಎಚ್.ಡಿ. ಪದವಿ ಪಡೆದರು. ಬೆಂಗಳೂರು ವಿಶ್ವವಿದ್ಯಾಲಯ, ಹಂಪಿಯ ಕನ್ನಡ ವಿಶ್ವವಿದ್ಯಾಲಯ ಹಾಗು ಕುವೆಂಪು ಭಾಷಾಭಾರತಿಯನ್ನು ಬೌದ್ಧಿಕವಾಗಿ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ವಿಮರ್ಶೆ, ನಾಟಕ, ಕಾವ್ಯಮೀಮಾಂಸೆ, ಭಾಷಾಶಾಸ್ತ್ರ, ಶೈಲಿಶಾಸ್ತ್ರ, ಸಂಸ್ಕೃತಿ ಚಿಂತನೆ, ಸಂಪಾದನೆ ಮತ್ತು ಅನುವಾದಗಳ ಮೂಲಕ ಕನ್ನಡಕ್ಕೆ ಹಲವಾರು ಪ್ರಮುಖ ಕೃತಿಗಳನ್ನು ಕೊಟ್ಟಿದ್ದಾರೆ. 'ಭಾಷೆಯ ಸುತ್ತಮುತ್ತ', 'ಬೇರು ಕಾಂಡ ಚಿಗುರು', 'ಮತ್ತೆ ಭಾಷೆಯ ಸುತ್ತಮುತ್ತ', 'ಕನ್ನಡ ಜಗತ್ತು: ಅರ್ಧ ಶತಮಾನ', 'ಶೈಲಿಶಾಸ್ತ್ರ', 'ನುಡಿಗಳ ಅಳಿವು', 'ನಮ್ಮೊಡನೆ ನಮ್ಮ ನುಡಿ', 'ಚಾಮ್‌ಸ್ಕಿ ಜೊತೆಗೆ ಎರಡು ಹೆಜ್ಜೆ', 'ದ್ವಿಭಾಷಿಕತೆ' - ಅವರ ಕೆಲವು ಪ್ರಮುಖ ಕೃತಿಗಳು. ಅವರ ಈವರೆಗಿನ ಬರಹಗಳು 'ತೊಂಡುಮೇವು' ಹೆಸರಿನಲ್ಲಿ ಸಂಪುಟಗೊಂಡಿವೆ. ಈ ಹಿಂದೆ ಕೆವಿಎನ್ ಅವರು ಎಚ್.ಎಸ್. ರಾಘವೇಂದ್ರರಾವ್ ಅವರ ಜೊತೆಗೂಡಿ ಎರಿಕ್ ಫ್ರಾಂನ 'ಪ್ರೀತಿಸುವುದೆಂದರೆ?' ಕೃತಿಯನ್ನು ಅನುವಾದಿಸಿದ್ದರು. ಇತ್ತೀಚೆಗೆ ಜೀನ್ ಪಾಲ್ ಸಾರ್ತ್ರ್‌ರ ಕೃತಿಯನ್ನು 'ಬುದ್ಧಿಜೀವಿಯ ಬಿಕ್ಕಟ್ಟುಗಳು' ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿಗಳು ಸಂದಿವೆ.